3. ಜಾನುವಾರುಗಳ ಲುಕ್ನಾನು ಪ್ರಕರಣದಲ್ಲಿ ಅಂದಾಜು ವೆಚ್ಚದ ಶೇಕಡಾ 25ರಷ್ಟು ನೀಡುತ್ತಿದ್ದ ಪರಿಹಾರವನ್ನು ಶೇಕಡಾ 50ಕ್ಕೆ ಏರಿಸಲಾಗಿದೆ.

4. ಬಾವಿ ನೀರಾವರಿ ಪಂಪ್‌ಸೆಟ್‌ಗಳ ದುರಸ್ತಿಗಾಗಿ ರೂ. 3000.00 ಪರಿಹಾರ ಧನ ನೀಡುವುದು.

5. ಪೂರ್ಣ ನಾಶಹೊಂದಿದ ಮನೆಗಳಿಗೆ ಪರಿಹಾರವಾಗಿ ರೂ.5000.00 ನೀಡುವ ಆದೇಶ. ಇದರಲ್ಲಿ ರೂ. 2000.00 ನಗದು ರೂಪದಲ್ಲಿ ಹಾಗೂ ರೂ. 3,000.00 ಕಟ್ಟಡ ಸಾಮಗ್ರಿಗಳ ರೂಪದಲ್ಲಿ ನೀಡಲಾಗುವುದು.

ಅತೀವೃಷ್ಟಿ ಪರಿಹಾರ ಕಾರ್ಯಗಳಿಗೆ ಕೇಂದ್ರ ಸರ್ಕಾರದಿಂದ ಕೋರಿರುವ ನೆರವಿನ ಮೊತ್ತ.

194. 129. ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಅತಿವೃಷ್ಟಿ ಪರಿಹಾರ ಕಾರ್ಯಗಳಿಗೆ ಇದುವರೆಗೆ ವೆಚ್ಚ ಮಾಡಿರುವ ಹಣ ಎಷ್ಟು ?

ಆ) ಅತಿವೃಷ್ಟಿ ಪರಿಹಾರ ಕಾರ್ಯಗಳಿಗೆ ಕೇಂದ್ರದಿಂದ ಕೋರಲಾದ ನೆರವಿನ ಮೊತ್ತ ಎಷ್ಟು ?

ಇ) ಕೇಂದ್ರ ಸರ್ಕಾರದಿಂದ ದೊರೆತ ನೆರವಿನ ಮೊತ್ತ ಎಷ್ಟು ?

ಈ) ಅತಿವೃಷ್ಟಿ ಪರಿಹಾರ ಕಾರ್ಯಗಳಿಗೆ ಕೇಂದ್ರ ಬಿಡುಗಡೆ ಮಾಡಲು ಒಪ್ಪಿರುವ ನೆರವಿನ ಮೊತ್ತ ಎಷ್ಟು ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):–

ಅ) ರಾಜ್ಯದಲ್ಲಿ ದಿನಾಂಕ 1.4.92 ರಿಂದ 24.12.1992ರವರೆಗೆ ಅತಿವೃಷ್ಟಿ ಪರಿಹಾರ ಕಾರ್ಯಗಳಿಗಾಗಿ ವೆಚ್ಚ ಮಾಡಿರುವ ಮೊತ್ತ ರೂ. 25.55 ಕೋಟಿ.

ಆ) ರೂ. 200.00 ಕೋಟಿ

ಇ) ಕೇಂದ್ರ ಸರ್ಕಾರವು ಈ ಕೆಳಕಂಡಂತೆ ನೆರವನ್ನು ಒದಗಿಸಿದೆ.

	ಕೋಟಿ ರೂ.ಗಳಲ್ಲಿ
1992–93ನೇ ಸಾಲಿಗೆ ಕೇಂದ್ರದಿಂದ ರಾಜ್ಯ ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ವಂತಿಗೆ	20.25
1993–94ನೇ ಸಾಲಿನ 1 ಮತ್ತು 2ನೇ ಕಂತಿನ ಮುಂಗಡ ವಂತಿಗೆ –, 'ರಾಜ್ಯ ಪ್ರಕೃತಿ ವಿಕೋಪ ಪರಿಹಾರ ನಿಧಿಗೆ'.	10.12
ಒಟ್ಟು	30.37 ಕೋಟಿ

ಈ) ಕೇಂದ್ರ ಸರ್ಕಾರದಿಂದ ಹೆಚ್ಚಿನ ನೆರವಿನ ಬಗ್ಗೆ ಆಶ್ವಾಸನೆ ಇಲ್ಲ. ಆದಾಗ್ಯೂ ರಾಜ್ಯ ಸರ್ಕಾರವು ಕೈಗೊಂಡಿರುವ ಪ್ರವಾಹ ಪರಿಹಾರ ಕಾರ್ಯಕ್ರಮಗಳಿಗೆ ಹೆಚ್ಚಿನ ಕೇಂದ್ರದ ನೆರವನ್ನು ಒದಗಿಸಲು ಒತ್ತಾಯಿಸಲಾಗಿದೆ.